**ಅಸಲು ದಾವೆ ಸಂಖ್ಯೆ.209/2019**
**ಡಿ. ಡಬ್ಲ್ಯು:1**

**ದಿನಾಂಕ:13.10.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿಪರ ಶ್ರೀ. ಸಿ.ವಿ.ಎಸ್ ವಕೀಲರಿಂದ:-**

ದಾವಾ ಆಸ್ತಿಗಳು ಮತ್ತು ನಮಗೆ ಸೇರಿದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. 4 ಮತ್ತು 6 ನೇ ಪ್ರತಿವಾದಿಗಳು ನನ್ನ ಸಹೋದರರು. ನನ್ನ ತಂದೆಗೆ ವಿಭಾಗದಲ್ಲಿ ಆಸ್ತಿಗಳು ಬಂದಿರುತ್ತವೆ ಎಂದರೆ ಸರಿ. ನನ್ನ ತಂದೆ, 1 ನೇ ಪ್ರತಿವಾದಿಯ ತಂದೆ ಹಾಗೂ ವಾದಿ 1997 ನೇ ಸಾಲಿನಲ್ಲಿ ಒಟ್ಟು ಕುಟುಂಬಂದ ಆಸ್ತಿಗಳು ವಿಭಾಗಮಾಡಿಕೊಂಡಿದ್ದರು ಎಂದರೆ ಗೊತ್ತಿಲ್ಲ. ವಿಭಾಗದಂತೆ ಹಿಸ್ಸೆದಾರರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ವಾದಿಯ ಭಾಗಕ್ಕೆ ಬಂದಿರುವ ಆಸ್ತಿಗಳ ಮೇಲೆ ನಮಗೆ ಹಕ್ಕು ಇರುವುದಿಲ್ಲ. ಅದೇ ರೀತಿ ನಮಗೆ ಸೇರಿದ ಆಸ್ತಿಗಳ ಮೇಲೆ ವಾದಿಗೂ ಹಕ್ಕು ಇರುವುದಿಲ್ಲ. ದಾವಾ ಅನುಸೂಚಿ ಎರಡು ಆಸ್ತಿಯ ಉತ್ತರ ದಿಕ್ಕಿಗೆ ನನ್ನ ತಾಯಿಗೆ ಸೇರಿದ ಆಸ್ತಿ ಇದೆ ಎಂದರೆ ಸರಿ. ಅನುಸೂಚಿ 1 ರ ಆಸ್ತಿಯ ದಕ್ಷಿಣಕ್ಕೆ 1 ನೇ ಪ್ರತಿವಾದಿಯ ಆಸ್ತಿ ಇದೆ ಎಂದರೆ ಸರಿ. ನನ್ನ ತಂದೆಯ ಭಾಗಕ್ಕೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಅದರ ವಿಸ್ತೀರ್ಣ ಗೊತ್ತಿಲ್ಲ. ನನ್ನ ತಂದೆ ಜಗದೀಶ್ ಎಂಬುವವರಿಗೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳು ವಾದಿಗೆ ಸೇರಿರುತ್ತವೆ ಎಂದರೆ ಸರಿ. ದಿನಾಂಕ:01.04.2019 ರಂದು ವಾದಿ ಸದರಿ ಆಸ್ತಿಗಳಿಗೆ ತಂತಿ ಬೇಲಿ ಹಾಕುವಾಗ ಅಡಚಣೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಭೂ ದಾಖಲೆಗಳ ನಿರ್ದೇಶಕರಿಗೆ ಜಮೀನನ್ನು ಅಳತೆ ಮಾಡಿಸುವಂತೆ ಅರ್ಜಿ ನೀಡಿದ್ದೆವು ಎಂದರೆ ಸರಿ. ನಾವು ಪುನಹ ಡಿಡಿಎಲ್.ಆರ್ ಚಿಕ್ಕಮಗಳೂರು ಇವರಿಗೆ ಅರ್ಜಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಅರ್ಜಿಯನ್ನು ಡಿ.ಡಿ.ಎಲ್.ಆರ್ ನವರು ತಿರಸ್ಕರಿಸಿರುತ್ತಾರೆ ಎಂದರೆ ಸರಿ. ವಾದಿಯ ಸ್ವಾಧೀನಕ್ಕೆ ತೊಂದರೆ ಮಾಡುತ್ತಿದ್ದೇವೆಂದರೆ ಸರಿಯಲ್ಲ.

**ಮರುವಿಚಾರಣೆ: ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.